**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ/ 71/ಜೈಅಯೋ/2015

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, **ದಿನಾಂಕ 14.10.2015**

# ಸುತ್ತೋಲೆ

ವಿಷಯ `ಕೇಂದ್ರ ಪುರಸ್ಕೃತ ಯೋಜನೆಯಾದ ನ್ಯಾಷನಲ್ ಬಯೋಗ್ಯಾಸ್ ಅಂಡ್ ಮೆನ್ಯುರ್ ಮ್ಯಾನೇಜ್‌ಮೆಂಟ್ (NBMMP)ಯೋಜನೆಯ ಅನುಷ್ಠಾನ ಕುರಿತು

ಉಲ್ಲೇಖ **2014-15**ನೇ ಸಾಲಿನ ಕಾರ್ಯಕ್ರಮದ ಹಣಬಳಕೆ ಪ್ರಮಾಣ ಪತ್ರ ಆಧರಿಸಿ.

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಗ್ರಾಮೀಣ ಜನತೆಯ ಅದರಲ್ಲೂ ಮಹಿಳೆಯರಿಗಾಗಿಯೇ ಇರುವ ಕಾರ್ಯಕ್ರಮವಾಗಿದೆ. ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು NBMMP ಯೋಜನೆಯ ರಾಜ್ಯ ನೋಡಲ್ ಏಜನ್ಸಿಯಾಗಿದ್ದು, ಜಿಲ್ಲಾ ಪಂಚಾಯಿತಿಗಳು ಅನುಷ್ಠಾನ ಏಜೆನ್ಸಿಗಳಾಗಿ ಕೇಂದ್ರ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚಿ, ಭೌತಿಕ ಗುರಿ ಹಾಗೂ ಸಹಾಯಧನದ ಪರಿಷ್ಕರಣೆಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ಆಯಾ ಸಾಲಿಗೆ ಬಿಡುಗಡೆ ಮಾಡಿದ ಕೇಂದ್ರ ಸಹಾಯಧನಕ್ಕೆ ವೆಚ್ಚ ಭರಿಸಿ, ಸಿ.ಎ. ಆಡಿಟ್ ವರದಿ/ಮಹಾಲೇಖಪಾಲರಿಂದ ದೃಢೀಕರಿಸಲ್ಪಟ್ಟ ಆಡಿಟ್ ವರದಿ(SOE ಸೇರಿದಂತೆ) ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಸಹಾಯಧನ ಪಡೆಯಬೇಕಿರುತ್ತದೆ. ಇಲ್ಲದಿದ್ದಲ್ಲಿ ಕಾರ್ಯಕ್ರಮದಡಿ ಕೇಂದ್ರ ಸಹಾಯಧನ ಪಡೆಯಲು ಸಾಧ್ಯವಾಗುವುದಿಲ್ಲ.

ಈ ನಿಟ್ಟಿನಲ್ಲಿ ಕಾರ್ಯಕ್ರಮದ **2014-15**ನೇ ಸಾಲಿನ ಹಣಬಳಕೆ ಪ್ರಮಾಣ ಪತ್ರ ಹಾಗೂ ಸಿ.ಎ. ಆಡಿಟ್ ವರದಿಯನ್ನು ಪರಿಶೀಲಿಸಲಾಗಿ, ಬಹುತೇಕ ಜಿಲ್ಲಾ ಪಂಚಾಯತ್‌ಗಳು ಕಾರ್ಯಕ್ರಮದಡಿ ಬಿಡುಗಡೆ ಮಾಡಿದ ಕೇಂದ್ರ ಹಾಗೂ ರಾಜ್ಯ ಸಹಾಯಧನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸದೇ ಬ್ಯಾಂಕ್ ಖಾತೆಯಲ್ಲಿರಿಸಿರುವುದು ಮಹಾಲೇಖಪಾಲರ ಹಾಗೂ ಆರ್ಥಿಕ ಇಲಾಖೆಯ ಆಕ್ಷೇಪಣೆಗೆ ಒಳಪಡುತ್ತದೆ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ***ಆದ್ದರಿಂದ ಕಾರ್ಯಕ್ರಮದ ಮಾರ್ಗಸೂಚಿ ಮತ್ತು ಆದೇಶಗಳನ್ವಯ ಕೂಡಲೇ ಆಯಾ ಸಾಲಿಗೆ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸಿ ಸರ್ಕಾರಕ್ಕೆ ವರದಿ ಮಾಡುವುದು.*** ಸಹಾಯಧನವನ್ನು ಪಾವತಿಸಲು ಏನಾದರೂ ಅಡಚಣೆಗಳಿದ್ದಲ್ಲಿ / ಸಹಾಯಧನ ಅಗತ್ಯಕ್ಕಿಂತ ಹೆಚ್ಚಿಗೆ ಬಿಡುಗಡೆಯಾದಲ್ಲಿ ಅಥವಾ ಅಗತ್ಯತೆ ಇಲ್ಲದಿದ್ದಲ್ಲಿ ಸರ್ಕಾರದ ಗಮನಕ್ಕೆ ತರುವುದು. ತಪ್ಪಿದ್ದಲ್ಲಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದೆಂಬ ಅಂಶವನ್ನು ಈ ಮುಖೇನ ತಿಳಿಸಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ಯವರಿಂದ
ಅನುಮೋದಿಸಲ್ಪಟ್ಟಿದೆ

14/10/15
(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗೆ:**

1. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿಗಳು(ಅಭಿವೃದ್ಧಿ)/ಯೋಜನಾ ನಿರ್ದೇಶಕರು/ಮುಖ್ಯ ಲೆಕ್ಕಾಧಿಕಾರಿಗಳು
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಯೋಜನಾ ಅಭಿಯಂತರರು(ಸಗ್ರಾಇಂಕಾ) ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.ಪಂ. ಇಲಾಖೆ ಮಾಹಿತಿಗಾಗಿ ಕಳುಹಿಸಿದೆ.